# ದೈವೀ ವೀಣೆ – ಮಾನುಷೀ ವೀಣೆ

**ಶಶಿಕಲಾ ಶ್ರೀಧರ್**

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

ಇದುವರೆವಿಗೂ ವೀಣೆಯ ಪ್ರಾಚೀನತೆ, ಅದರ ಹುಟ್ಟು, ಬೆಳವಣಿಗೆ, ಅದಕ್ಕೆ ಕಾರಣರಾದ ವಿದ್ಯಾರಣ್ಯ ಶ್ರೀಚರಣರೇ ಮೊದಲಾದ ಲಾಕ್ಷಣಿಕರ ಕೊಡುಗೆ ಮುಂತಾದುವುಗಳನ್ನು ಸ್ಮರಿಸಿದೆವು. ಈಗ ವೀಣೆಯ ರಚನೆ, ವೈಣಿಕನ ಲಕ್ಷಣಗಳು, ಅವನ ಮನೋಧರ್ಮ, ಪರಿಪೂರ್ಣರೂಪ ಪಡೆದ ಮಾನುಷೀ ವೀಣೆ ದೈವೀ ವೀಣೆಯಾಗುವ ಬಗೆ ಇವುಗಳನ್ನು ಸ್ಮರಿಸೋಣ.

## ವೀಣೆಯ ರಚನೆ

ಪ್ರಾಚೀನ ಕಾಲದಿಂದ ಈಗಿನವರೆಗೂ ಅನೇಕ ಗ್ರಂಥಗಳು ವೀಣೆಯ ರಚನೆ, ವೈವಿಧ್ಯ, ಅದರ ಅಂಗಪ್ರತ್ಯಂಗಗಳ ಅಧಿದೇವತೆಗಳು, ವಾದನಕ್ರಮ, ವಾದನತಂತ್ರ, ಹಸ್ತವ್ಯಾಪಾರ ಗಳು, ವಿವಿಧ ರಾಗಗಳ ನಿರೂಪಣೆ ಇವುಗಳನ್ನು ಸ್ಪಷ್ಟವಾಗಿ ತಿಳಿಸುತ್ತಾ ಬಂದಿವೆ. ಇದರ ರಚನೆಯ ಮೂಲಸ್ಫೂರ್ತಿ ಯಾವುದು, ಮೂಲತತ್ತ್ವ ಯಾವುದು ಎಂಬುದನ್ನು ವಿಚಾರ ಮಾಡೋಣ. ರತವಾದ್ಯ ಅಥವಾ ತಂತೀವಾದ್ಯಗಳಲ್ಲಿ ಬಹು ಪ್ರಾಚೀನ ವಾದ್ಯವಾದ ವೀಣೆ ಯಾವುದರ ಪ್ರತೀಕ ಎಂಬು ದನ್ನೂ ತಿಳಿಯೋಣ.

"ಅಥ ಖಲ್ವಸೌ ದೈವೀ ವೀಣಾ ತದನುಕೃತಿರಸೌ ಮಾನುಷೀ ವೀಣಾ" ಎಂಬುದು ಬೆಳಕನ್ನು ಕಂಡವರು ವೀಣೆಯ ಬಗ್ಗೆ ನುಡಿದಿರುವ ದೈವೀವಾಣಿ. ಈ ವೀಣೆಯನ್ನು ಮಾಡಲು ಮೂಲವಾವುದೋ ಆ ದೈವೀವೀಣೆಯ ಅನುಕೃತಿ ಈ ಮಾನುಷೀ ವೀಣೆ. ಈ ವೀಣೆಯಲ್ಲಿ ಭೌತಿಕವಾದ ಅಂಶಗಳನ್ನು ದೇವತಾ ಭಾವದೊಡನೆ ನೋಡಿ ತಿಳಿದುಕೊಳ್ಳಬೇಕಾದ ಅಂಶಗಳು ಇವೆ. ಈ ಪರಮ ಮಂಗಳ ಭಾವದೊಡನೆ ನುಡಿಸಿ ದಾಗ ಮಾನುಷೀ ವೀಣೆ ದೈವೀ ವೀಣೆಯಾಗುವುದು.

ಆದುದರಿಂದ ವೀಣಾವಾದನಕ್ಕೆ ಬರಿಯ ಸಂಗೀತಜ್ಞಾನ ಒಂದೇ ಪ್ರಮುಖವಲ್ಲ. ಆಂತರಿಕ ಜ್ಞಾನಕ್ಕನುಗುಣವಾಗಿ ನುಡಿಸುವ ಆತ್ಮಜ್ಞಾನ ಅದಕ್ಕಿಂತಲೂ ಪ್ರಮುಖವಾದುದು. ಆಗ ಮಾತ್ರ ಮರದಿಂದ ತಯಾರು ಮಾಡಿದ ವೀಣೆ ಸಾಧಕನನ್ನು ಅಮರತ್ವಕ್ಕೇರಿಸುವುದು. ಭಾರತೀಯ ವಾದ್ಯಗಳ ವೈಶಿಷ್ಟ್ಯ ವೇನೆಂದರೆ ಅವು ನಾದಯೋಗಿಗಳಿಂದ ನಿರ್ಮಿಸಲ್ಪಟ್ಟ ವಾದ್ಯ ವಿಶೇಷಗಳು. ಯೋಗಿಗಳು ಧ್ಯಾನದಲ್ಲಿ ಕೇಳುವ ಅಂತರ್ನಾದ ವನ್ನು ಹೊರತರಲು ಬೇಕಾದ ವಿಶೇಷ ರಚನೆಯಿಂದ ಕೂಡಿರುತ್ತವೆ. ಈ ವಾದ್ಯವಿಶೇಷಗಳಲ್ಲಿ ಮುಖ್ಯವಾದವು ವೀಣಾ ವೇಣು ಮೃದಂಗಾದಿಗಳಾದರೂ ವೀಣೆಯು ಅತ್ಯುತ್ತಮ ನಿದರ್ಶನ.

ವೀಣೆಯ ಬುರುಡೆಯು ಸಹಸ್ರಾರ ಕಮಲದ ಪ್ರತೀಕ, ವೀಣಾದಂಡದಲ್ಲಿ ೨೧ ಮಣಿಗಳಿರುತ್ತವೆಯೆಂದು ಸಂಗೀತ ಯೋಗಶಾಸ್ತ್ರಗಳು ಹೇಳುತ್ತವೆ.

ವಜ್ರದಂಡಸಮುದ್ಭೂತಾ ಮಣಯಶ್ಚೈಕವಿಂಶತಿಃ ।
ಸುಷುಮ್ನಾಯಾಸ್ಥಿತಾ ಸರ್ವೇ ಸೂತ್ರೇ ಮಣಿಗಣಾ ಇವ ॥

ಈ ವೀಣಾದಂಡದ ಕೊನೆಯಲ್ಲಿರುವ ಸರ್ಪವು ನಾದಜನನಿ ಯಾದ ಕುಂಡಲಿನೀಶಕ್ತಿಯ ಪ್ರತೀಕ. ನಾದಾತ್ಮಿಕೆಯಾದ ಈ ಕುಂಡಲಿನೀ ಶಕ್ತಿ ಮೂಲಾಧಾರದಿಂದ ಹಿಡಿದು ಸಹಸ್ರಾರ ದವರೆಗೆ ಇರುವ ಸ್ವರಸ್ಥಾನಗಳಲ್ಲಿ ಸಪ್ತಸ್ವರಗಳನ್ನುಂಟುಮಾಡು ತ್ತಾಳೆ ಎಂದು ಸಂಗೀತಯೋಗಶಾಸ್ತ್ರಗಳು ಸಾರುತ್ತಿವೆ.

## ವೈಣಿಕನ ಲಕ್ಷಣಗಳು


ಪಾರ್ಶ್ವದೇವನು ತನ್ನ 'ಸಂಗೀತಸಮಯಸಾರ'ದಲ್ಲಿ ಒಬ್ಬ ದಕ್ಷ ವೈಣಿಕನಲ್ಲಿ ಇರಬೇಕಾದ ಗುಣಗಳನ್ನು ಹೀಗೆ ಹೇಳಿದ್ದಾನೆ:

ಜಿತೇಂದ್ರಿಯಃ ಪ್ರಗಲ್ಭಶ್ಚ ಸ್ಥಿರಾಸನಪರಿಗ್ರಹಃ
ಶರೀರ ಸೌಷ್ಠವೋಪೇತಃ ಕರಯೋರ್ವಿಜಿತಶ್ರಮಃ ।

ಸಾವಧಾನೋ ಭಯತ್ಯಕ್ತೋ ರಾಗರಾಗಾಂಗತತ್ತ್ವವಿತ್
ಗೀತವಾದನದಕ್ಷಶ್ಚ ವೈಣಿಕಃ ಕಥಿತೋ ವರಃ ॥


"ಜಿತೇಂದ್ರಿಯನೂ ಗಾಂಭೀರ್ಯವುಳ್ಳವನೂ ಸ್ಥಿರವಾಗಿ ಆಸನ ದಲ್ಲಿ ಕುಳಿತವನೂ ಆರೋಗ್ಯದಿಂದ ಕೂಡಿದ ಬಲಿಷ್ಠ ವಾದ ಶರೀರ ಮತ್ತು ಕೈಗಳುಳ್ಳವನೂ ಏಕಾಗ್ರತೆಯುಳ್ಳವನೂ ಭಯ ರಹಿತನಾದವನೂ ರಾಗರಾಗಾಂಗಗಳನ್ನು ಬಲ್ಲವನೂ ಗೀತ ಗಾಯನ ಮತ್ತು ವಾದನವನ್ನು ಬಲ್ಲವನೂ ಆಗಿರುವವನು ದಕ್ಷ ವೈಣಿಕನೆಂದು ಕರೆಯಲ್ಪಡುತ್ತಾನೆ."

ವೈಣಿಕನ ವಿಶೇಷ ಮನೋಧರ್ಮ ವೀಣಾವಾದನದಲ್ಲಿ ಹರಿದುಬರುವುದರಿಂದ ಇದು ವೈಯಕ್ತಿಕ ಪ್ರತಿಭೆಯನ್ನು ಎತ್ತಿ




ನಾಲ್ಕು ತಂತಿಗಳು

1. ಅನುಮಂದ್ರ —> ಅಥರ್ವಣವೇದ
2. ಮಂದ್ರ —> ಸಾಮವೇದ
3. ಪಂಚಮ —> ಯಜುರ್ವೇದ
4. ಸಾರಣಿ —> ಋಗ್ವೇದ



ವೀಣೆ - ವೇದ - ಗಾಯತ್ರೀ

ಹಿಡಿಯುತ್ತದೆ. ಗಾಯನ ಶೈಲಿಯಲ್ಲಿಯೇ ವೀಣೆಯನ್ನು ನುಡಿಸುವುದೇ ಗಾಂಭೀರ್ಯದಿಂದ ಕೂಡಿದ ಶೈಲಿ. ವೀಣೆ ಕಲಾತ್ಮಕವೂ ದೈವೀಕವೂ ಹಾಗೂ ಚಾರಿತ್ರಿಕ ಮಹತ್ವವುಳ್ಳ ವಿಶೇಷ ವಾದ್ಯ. ಇದರ ಬುನಾದಿಯನ್ನು ನಿರ್ಮಿಸಿದವರು ಋಷಿ ಮುನಿಗಳು, ಇದರ ಶಾಸ್ತ್ರಪ್ರಮೇಯ ಪರಂಪರೆಯನ್ನು ಸೃಷ್ಟಿಸಿದವರು ದೊರೆಗಳು, ದಾರ್ಶನಿಕರು, ಯೋಗಿಗಳು, ಅಮಾತ್ಯರು, ಸೇನಾನಿಗಳು, ಯಾಜ್ಞಿಕರು, ತಾಂತ್ರಿಕರು ಹಾಗೂ ಮಂತ್ರಸಿದ್ಧರು. ಇದರ ಪ್ರಬಂಧ ಸಂಪದವನ್ನು ರಚಿಸಿದವರು ಸಂತರು, ಭಕ್ತರು ಮತ್ತು ಮುಮುಕ್ಷುಗಳು. ಆದ್ದರಿಂದ ಅಂತರಂಗ ಶುದ್ಧಿ, ಬಹಿರಂಗ ಶುದ್ಧಿ, ಶುದ್ಧ ಮನೋಧರ್ಮ, ಮಾಧ್ಯಮಶುದ್ಧಿ ಮತ್ತು ಭಾವಶುದ್ಧಿಗಳುಳ್ಳ ವೈಣಿಕ ತನ್ನ ವೀಣಾವಾದನದಿಂದ ಪವಾಡಗಳನ್ನೇ ಸಾಧಿಸಬಹುದು, ಮಾನುಷೀ ವೀಣೆಯನ್ನು ದೈವೀ ವೀಣೆಯಾಗಿ ಮಾಡಬಹುದು, ಮಾನವನನ್ನು ದೈವತ್ವಕ್ಕೆ ಏರಿಸಬಹುದು.

ಹೀಗೆ ವೀಣೆಯ ಮಹತ್ವಕ್ಕೆ ಸಾಟಿಯಾದ ವಾದ್ಯ ಮತ್ತೊಂದಿಲ್ಲ. ವಿಶ್ವದ ಪರಮತತ್ತ್ವವನ್ನು ಒಳಗೊಂಡು, ವೇದಗಳ ಸಾರವನ್ನು ಸಾರುತ್ತಿರುವ ದೈವೀವಾದ್ಯವೀಣೆ.

## ವೀಣೆ - ವೇದ - ಗಾಯತ್ರೀ


ವೀಣೆಯ ಮೇಲ್ಭಾಗದಲ್ಲಿರುವ ನಾಲ್ಕು ತಂತಿಗಳು ಶುದ್ಧ ಸತ್ತ್ವಗುಣದ ತತ್ತ್ವವಾಗಿದೆ.

| | | |
|---|---|---|
| ೧. ಸಾರಣೀ (೧ನೇ ತಂತಿ) | ಜ್ಞಾನಶಕ್ತಿ | ಋಗ್ವೇದ |
| ೨. ಪಂಚಮ (೨ನೇ ತಂತಿ) | ಕ್ರಿಯಾಶಕ್ತಿ | ಯಜುರ್ವೇದ |
| ೩. ಮಂದ್ರ (೩ನೇ ತಂತಿ) | ಇಚ್ಛಾಶಕ್ತಿ | ಸಾಮವೇದ |
| ೪. ಅನುಮಂದ್ರ (೪ನೇ ತಂತಿ) | ಇಚ್ಛಾಶಕ್ತಿಯ ಅನುವರ್ತಿ | ಅಥರ್ವವೇದ |

ಹೀಗೆ ವೀಣಾತಂತ್ರಿ ಚತುಷ್ಟಯಕ್ಕೂ ಚತುರ್ವೇದಗಳಿಗೂ ಇರುವ ಸಮನ್ವಯವನ್ನು ಪ್ರತಿಪಾದಿಸುವಂತೆ, ವೀಣೆಯಲ್ಲಿರುವ ೨೪ ಮೆಟ್ಟುಗಳು ೨೪ ಅಕ್ಷರಗಳುಳ್ಳ ಗಾಯತ್ರೀ ಮಂತ್ರದ ತತ್ತ್ವವನ್ನು ಪ್ರತಿಪಾದಿಸುತ್ತಾ ಬ್ರಹ್ಮಾಂಡದ ಸೃಷ್ಟಿ, ಸ್ಥಿತಿ, ಲಯ ಎಂಬ ಭಗವದ್ವ್ಯಾಪಾರವನ್ನೂ ಪ್ರತಿಪಾದಿಸುವುದಾಗಿದೆ.


## ವೀಣೆ ಮತ್ತು ಮಾನವ ಶರೀರ

ಬ್ರಹ್ಮಾಂಡದಲ್ಲಿರುವ ಸಕಲ ತತ್ತ್ವಗಳೂ ಪಿಂಡಾಂಡವೆನಿಸುವ ಮಾನವ ಶರೀರದಲ್ಲಿರುವುದರಿಂದ ವೀಣೆಯ ತತ್ತ್ವಗಳೂ ಮಾನವ ಶರೀರದಲ್ಲಿ ಇರುವುವು




ಶರೀರದಲ್ಲಿರುವ ವೀಣೆಯ ಚಿತ್ರ

ಮಾನವ ಶರೀರದ ಬೆನ್ನಿನಲ್ಲಿ ಗುದದಿಂದ ಶಿರಸ್ಸಿನ ಪರ್ಯಂತ ಇರುವ ಉದ್ದವಾದ ಬೆನ್ನೆಲುಬೇ ವೀಣಾದಂಡ. ಈ ಬೆನ್ನೆಲುಬಿನಲ್ಲಿರುವ ೨೪ ಭಾಗಗಳೇ (ಮಣಿಗಳೇ) ವೀಣೆಯಲ್ಲಿರುವ ೨೪ ಮೆಟ್ಟುಗಳು. ಮಾನವನ ಬೆನ್ನೆಲುಬಿನಲ್ಲಿ ಕೆಳಭಾಗದಲ್ಲಿ ದಪ್ಪವಾಗಿಯೂ ಅಗಲವಾಗಿಯೂ ಇದ್ದು ಕ್ರಮೇಣ ಅದು ತಗ್ಗುತ್ತ ಶಿರಸ್ಸಿನ ಪ್ರದೇಶದ ಬಳಿ ಅದು ಸಣ್ಣದಾಗುವಂತೆಯೇ, ವೀಣೆಯಲ್ಲಿ ಸಿಂಹದ ಮುಖ ಅಥವಾ ವ್ಯಾಳಿಯ ಬಳಿ ಮನೆಗಳು ವಿಶಾಲವಾಗಿದ್ದು ಶಿರೋಭಾಗದ ಬುರುಡೆಯ ಕಡೆ ಹೋಗುತ್ತಾ ಬಹು ಸಣ್ಣದಾಗಿರುತ್ತವೆ. ಬೆನ್ನಿನ ಮೂಳೆಯನ್ನು ಆಶ್ರಯಿಸಿ ಸುಷುಮ್ನಾ ನಾಡಿ ಹರಿದುಬಂದಿರುವಂತೆ ವೀಣೆಯೂ ತಂತಿಗಳನ್ನು ಹೊಂದಿದೆ. ಮಾನವನ ಬೆನ್ನಿನ ಮೂಳೆಯಲ್ಲಿ ಸೊಂಟದ ಕೆಳಭಾಗದಿಂದ ಎಂಟೆಂಟು ಮೂಳೆಗಳ ಪ್ರದೇಶದಲ್ಲಿ ಮಂದ್ರಸ್ಥಾಯಿ ಪ್ರಾರಂಭವಾಗಿ, ಅಲ್ಲಿಂದ ಮೇಲೆ ಎಂಟೆಂಟು ಮನೆಗಳಲ್ಲಿ ಮಧ್ಯಮಸ್ಥಾಯಿ ಹಾಗೂ ತಾರಸ್ಥಾಯಿಗಳು ಇರುವಂತೆಯೇ ವೀಣೆಯಲ್ಲೂ ಎಂಟೆಂಟು ಮನೆಗಳಲ್ಲಿ ಕ್ರಮವಾಗಿ ಮಂದ್ರ, ಮಧ್ಯಮ, ತಾರಸ್ಥಾಯಿಗಳು ಇರುತ್ತವೆ. ಸುಷುಮ್ನಾ ನಾಡಿಯಲ್ಲಿ ನಾದವು ಅನಾಹತ ಸ್ವರೂಪದಲ್ಲಿ ವ್ಯಾಪಿಸಿರುತ್ತದೆ. ಮೂಲಾಧಾರ, ಸ್ವಾಧಿಷ್ಠಾನ, ಮಣಿಪುರ, ಅನಾಹತ, ವಿಶುದ್ಧ, ಆಜ್ಞಾ ಹಾಗೂ ಸಹಸ್ರಾರದ ಪ್ರಧಾನ ಸ್ಥಳಗಳೇ ಸಪ್ತಸ್ವರಗಳ ಪ್ರಧಾನ ಸ್ಥಳಗಳಾಗಿವೆ. ಇವೆಲ್ಲವೂ ಮಿಳಿತವಾಗಿ ಓಂಕಾರ ನಾದಶಕ್ತಿಯಾಗಿ ಸುಷುಮ್ನಾ ನಾಡಿಯಲ್ಲಿ ವ್ಯಾಪಿಸಿರುವುದು ಯೋಗಿಗಳು ಧ್ಯಾನದಲ್ಲಿ ಕಂಡುಕೊಳ್ಳುವ ವಿಷಯವಾಗಿದೆ.




ಶರೀರದಲ್ಲಿ ವ್ಯಾಪ್ತಿ (ಸ್ವರಶಕ್ತಿ) ಸ್ಥಾನಗಳ ಚಿತ್ರ

ಆದ್ದರಿಂದ ದೈವೀ ವೀಣೆಯನ್ನನುಸರಿಸಿ ನಾದಬ್ರಹ್ಮವನ್ನು ಹೊರಪಡಿಸುವ ಅಂಗವಾಗಬೇಕು ಮಾನಷೀ ವೀಣೆ. ವೈಣಿಕನ ಮನೋಧರ್ಮ ಆತ್ಮಮೂಲದಿಂದ ಹೊರಟು ಬಂದು ಅವನ ವಾದನದಲ್ಲಿ ಹರಿದು ಬರಬೇಕು. ಅದು ವೈಣಿಕನನ್ನೂ ಶ್ರೋತೃವರ್ಗವನ್ನೂ ನಾದಮೂಲ ಓಂಕಾರ ಪ್ರತಿಪಾದ್ಯನಾದ ಪರಮಾತ್ಮನ ಬಳಿಗೆ ಕರೆದೊಯ್ಯುವ ಶಕ್ತಿಯನ್ನು ಹೊಂದಿರಬೇಕು. ಆಗ ಮಾತ್ರ ಮಾನುಷೀ ವೀಣೆ ದೈವೀ ವೀಣೆಯಾಗಿ ಮೋಕ್ಷದಾಯಕ ವಾದ್ಯವಾಗಿ "ಅಥ ಖಲ್ವಸೌ ದೈವೀ ವೀಣಾ ತದನುಕೃತಿರಸೌ ಮಾನುಷೀ ವೀಣಾ" ಎಂಬ ಋಷಿವಾಣಿಗೆ ವಿಷಯವಾಗುವುದು.

**ಗ್ರಂಥ ಋಣ :**


೧. *ಸ್ವರಮೇಳ ಕಳಾನಿಧಿ* — ಶ್ರೀರಾಮಾಮಾತ್ಯ

೨. *ಸಂಗೀತ ರತ್ನಾಕರ* — ಶಾರ್ಙ್ಗದೇವ

೩. *ಕರ್ನಾಟಕ ಸಂಗೀತವಾಹಿನಿ*
— ರಾ. ಸತ್ಯನಾರಾಯಣ,
ಮೈಸೂರು ವಿಶ್ವವಿದ್ಯಾಲಯ ಪ್ರಸಾರಾಂಗ

೪. *ಸಂಧ್ಯಾವಂದನೆಯ ತತ್ತ್ವಾರ್ಥ ಮತ್ತು ವೇದಪ್ರಕಾಶಿಕೆ*
—ಯಡತೊರೆ ಸುಬ್ಬರಾಯ ಶರ್ಮ

೫. *ಸಂಗೀತ ಶಾಸ್ತ್ರಜ್ಞಾನ ಪ್ರಬೋಧಿನೀ*
— ವೈಣಿಕ ವಿದ್ವಾನ್, ಹೆಚ್.ಎಸ್. ಕೃಷ್ಣಮೂರ್ತಿ


**ಆಶ್ರಮದ ಕಾರ್ಯಕ್ರಮಗಳು**

**ಏಪ್ರಿಲ್ 2003**

| | | |
|---|---|---|
| ಶ್ರೀರಾಮನವಮಿ | ಶುಕ್ರವಾರ | 11 |
| ಏಕಾದಶಿ | ಭಾನುವಾರ | 13 |
| ಏಕಾದಶಿ | ಭಾನುವಾರ | 27 |

ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಶನ್ನಿನ ಉಪಾಧ್ಯಕ್ಷರಾದ ಪರಮಪೂಜ್ಯ ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಅವರು ೨೦೦೩ರ ಏಪ್ರಿಲ್ ೧೬ರಿಂದ ೨೫ರವರೆಗೆ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮಕ್ಕೆ ಭೇಟಿ ನೀಡಲಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳನ್ನು ಬಯಸುವವರು ಆಶ್ರಮದ ಕಾರ್ಯಾಲಯವನ್ನು ಸಂಪರ್ಕಿಸಬೇಕಾಗಿ ವಿನಂತಿ.